**ದಿನಾಂಕಃ 01.12.2023 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಎಂ ಆರ್ ವಕೀಲರಿಂದಃ–**

ನಾನು ಬಿ.ಎ., ಓದಿದ್ದೇನೆ . ನಾನು ಈ ದಿನ 7 ನೇ ಪ್ರತಿವಾದಿ ಶ್ರೀಧರ ಎಂಬುವವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ . ನಾನು ಪಿಟ್ಲಾಲಿ ಗ್ರಾಮದಲ್ಲಿ ವಾಸವಿದ್ದೇನೆ ಎಂದರೆ ಸರಿ. ನನಗೆ ವಾದಿ ಮತ್ತು ಪ್ರತಿವಾದಿಗಳ ಪರಿಚಯ ಇದೆ ಎಂದರೆ ಸರಿ. 7 ನೇ ಪ್ರತಿವಾದಿ ಶ್ರೀಧರ ನನಗೆ ಸಂಬಂಧಿ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಪಿಟ್ಲಾಲಿ ಗ್ರಾಮದ ಸರ್ವೆ ನಂಬರ್ಃ 2/1 ರಲ್ಲಿ ಒಟ್ಟು 1 ಎಕರೆ ಜಮೀನು ಇದೆ . ಅದಕ್ಕೆ ಸಂಬಂಧ ಪಟ್ಟ ದಾಖಲೆಗಳನ್ನು ನಾನು ನೋಡಿಲ್ಲ . ಪಿಟ್ಲಾಲಿ ಗ್ರಾಮದಲ್ಲಿ ನನಗೆ ಸೇರಿದ ಒಟ್ಟು 15 ಎಕರೆ ಜಮೀನು ಇದ್ದು , ಅವುಗಳ ಸರ್ವೆ ನಂಬರ್ಃ 25, 193, 192 ಆಗಿದೆ .

ಹಿರಿಯೂರು – ರಂಗನಾಥಪುರ ರಸ್ತೆಗೆ ಹೊಂದಿಕೊಂಡ ಜಮೀನಿನಲ್ಲಿ ವಾದಿಗಳ ತಂದೆ ದಿ.ಎಸ್.ರಾಮಕೃಷ್ಣ ರೆಡ್ಡಿ ತನ್ನ ಜೀವಿತಾ ಕಾಲದಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ರಾಮಕೃಷ್ಣ ರೆಡ್ಡಿ ಅವರ ಮರಣದ ನಂತರ ಅವರ ಪತ್ನಿಯ ಹೆಸರಿಗೆ ಪೌತಿ ಖಾತೆ ಆಗಿತ್ತು ಎಂದರೆ ಸರಿ. ರಾಮಕೃಷ್ಣ ರೆಡ್ಡಿ ಮತ್ತು ಅವರ ಪತ್ನಿ ಜೀವಿತಾ ಕಾಲದಿಂದ ಇಲ್ಲಿಯವರೆಗೂ ವಾದಿಗಳೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ 9 ½ ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳು ಮನೆ ಕಟ್ಟಿಕೊಂಡು ಸುಮಾರು 50–60 ವರ್ಷಗಳಿಂದ ವಾಸವಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮತ್ತು ನರಸಿಂಹಮೂರ್ತಿ ಇವರು ಸದರಿ ದಾವಾ ಸ್ವತ್ತಿನಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಸಂಬಂಧಿಕರಾಗಿದ್ದು , ಅವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳಿಗೆ ಸೇರಿದ ಕೊಟ್ಟಿಗೆ , ಪೆಟ್ಟಿಗೆ ಅಂಗಡಿ ಮತ್ತು ಮನೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ

ಮಾತು ಕೇಳಿ ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,. ಹಿರಿಯೂರು.